made a reference that so far it has been manual one and whether it is going to be automatised. They have replied that they have sent up the proposal to the Director-General, Posts and Telegraphs, New Delhi. Probably, his approval is awaited.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಆಟೊಮ್ಯಾಟಿಕ್ ಟೆಲಿಪ್ರೋಕ್ ಎಕ್ಸ್‌ಚೇಂಜನ್ನು ಮೈಸೂರಿನಲ್ಲಿ ಕಟ್ಟಿಸುವುದಕ್ಕೆ ತೊಂದರೆ ಏನು ? ಏಂಗಳೂರಿನಲ್ಲಿ ಈಗಾಗಲೆ ಕಟ್ಟಲಾಗಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಈಗ ಮೈಸೂರಿನಲ್ಲಿ ಒಂದುಕಡೆ ಲ್ಯಾಂಡನ್ನು ಇದಕ್ಕೋಸ್ಕರ ತೆಗೆದು ಕೊಂಡಿದ್ದೇವೆ ; ಬಿಲ್ಡಿಂಗ್ ಪೆಷನರೀಸಿಗೆ ಈಗಾಗಲೇ ಆರ್ಡರ್ಸನ್ನು ಪ್ಲೇಸ್ ಮಾಡಿದ್ದೇವೆಂಬುದಾಗಿ ನಮಗೆ ವರ್ತಮಾನ ಬಂತು. ಆದಷ್ಟು ಜಾಗ್ರತೆಯಾಗಿ ಕೊಡುತ್ತೇವೆ.

ಶ್ರೀ ಜಿ. ವಿ. ಗೌಡ.—ಪ್ರತಿಯೊಂದು ಜಿಲ್ಲೆಯಲ್ಲೂ ಇದು ಅವಶ್ಯವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಬಂದಿದೆ.

ಶ್ರೀ ಜಿ. ವಿ. ಗೌಡ.—ಆ ರೀತಿ ಗೊತ್ತಿದ್ದರೆ ಮೈಸೂರು ನಗರಕ್ಕೆ ಈ ಆಟೊಮ್ಯಾಟಿಕ್ ಎಕ್ಸ್‌ಚೇಂಜ್ ಅವಶ್ಯಕವಿಲ್ಲವೇ ?

ಶ್ರೀ ಕೊಂಡಜ್ಜಿ ಬಸಪ್ಪ.—ಆ ರೀತಿ ಅವಶ್ಯಕತೆ ಇದೆಯೆಂದು ಸರ್ಕಾರದ ಗಮನಕ್ಕೆ ಬಂದರೆ ಅದಕ್ಕೆ ಗಮನ ಕೊಡುತ್ತೇವೆ.

Acquisition cases regarding the acquisition of lands for constructing houses for Harijans and others pending in Dharwar District.

*Q.—646. Sri SIDDAIAH KASHIMATH (Shirahatti).—

Will the Government be pleased to state :—

(*a*) the number of acquisition cases, regarding the acquisition of lands for constructing houses for Harijans and others that are pending in Dharwar District for the last three years ;

(*b*) the number of cases decided in each Taluk and the number of cases that are still pending ;

(*c*) the reason for the delay in deciding these acquisition cases ;

(*d*) whether they intend to adopt more speedy and quick methods in deciding these cases in the interest of the public ?

*A.—Smt. YASHODARA DASAPPA (Minister for Social Welfare).—

(*a*) Harijans	...	26
Others	...	109
		135

(*b*) As per statement given below

(*c*) Generally acquisition cases have necessarily to pass through a number of stages as required by statutory rules and the standing orders of Government. During the course of the stages some delay inevitably occurs even though effective measures are taken to expedite the proceedings at every stage.

(*d*) Yes.

Statement showing the number of cases decided in each Taluk and the number of cases that are still pending.

Name of the Taluk	No. of cases decided	No. of cases pending
1. Haveri	5	13
2. Hirekerur	6	9
3. Byadgi	6	9
4. Ranebennur	4	13
5. Dharwar	1	6
6. Hubli	8	18
7. Kalghatgi	...	5
8. Navalgund	...	1
9. Gadag	3	7
10. Ron	1	2
11. Nargund	...	3
12. Mundargi	...	2
13. Shiggaon	15	12
14. Sirahatti	6	6
15. Hanagal	28	20
16. Kundgol	8	7
17. Sirahatti	...	2
Total ...	91	135

ಶ್ರೀ ಸಿದ್ದಯ್ಯ ಕಾಶೀಮಠ್.—ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಪರಿಶಿಷ್ಟದಲ್ಲಿ 135 ಪ್ರಕರಣಗಳು ಉಳಿದಿವೆಯೆಂದು ಹೇಳಿದ್ದೀರಿ. ಅವು ಎಷ್ಟು ವರ್ಷಗಳಿಂದ ಪೆಂಡಿಂಗ್ ಇವೆ ?

†ಶ್ರೀಮತಿ ಯಶೋಧರ ದಾಸಪ್ಪ.— ಅವು ಎಷ್ಟು ಕಾಲದಿಂದ ಪೆಂಡಿಂಗ್ ಇವೆ ಯೆಂಬುದು ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಸಿದ್ದಯ್ಯ ಕಾಶೀಪುರ್.—ಹಾಗಾದರೆ ಈ ಕೇಸುಗಳನ್ನು ಶೀಘ್ರವಾಗಿ ಬಗೆ ಹರಿಸಲು ಸರ್ಕಾರದವರು ಯಾವ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ?

ಶ್ರೀಮತಿ ಯಶೋಧರ ದಾಸಪ್ಪ.— ಅಕ್ಸೆಸಿಷ್ಟ್ ಕೇಸಿನಲ್ಲಿ ಕೆಲವು ತೊಂದರೆಯಾಗಿವೆ. ಅವನ್ನೆಲ್ಲಾ ಈಗ 1961 ನೆ ಲ್ಯಾಂಡ್ ಅಕ್ವಿಸಿಷ್ಟ್ ಆಕ್ಟ್ ಪ್ರಕಾರ ಜಾರಿಗೆ ತರಬೇಕಾಗಿದೆ. ಸೆಕ್ಷನ್ 4 ರ ಪ್ರಕಾರ ಡೆಪ್ಯುಟಿ ಕಮಿಷನರ್ ಅವರು ಅವನ್ನೆಲ್ಲಾ ಪರಿಶೀಲನೆ ಮಾಡಿ ಫೈನಲ್ ಸ್ಟೇಜಸ್ಸಿಗೆ ಸರ್ಕಾರಕ್ಕೆ ಕಳುಹಿಸಬೇಕೆಂದು ಸೂಚನೆ ಮಾಡಿದ್ದೇವೆ. ಆ ರೀತಿ ಅವಕಾಶವನ್ನು ಮಾಡಿಕೊಟ್ಟಿದೆ.

ಶ್ರೀ ಸಿ. ಆರ್. ರಂಗೇಗೌಡ.—ಗದಗ್ ಟೌನಿನಲ್ಲಿ ಹಬ್ಬಿಗೆರೆ ಆಯರ್ ಮಿಲ್ ಪಕ್ಕದಲ್ಲಿ ಬಹಳ ವರ್ಷಗಳಿಂದಲೂ ಬೋವಿ ಜನಾಂಗದವರು ವಾಸ ಮಾಡುತ್ತಾ ಇದ್ದು ಆ ಜಾಗವನ್ನು ಅವರಿಗೇ ಕೊಡಬೇಕೆಂದು ಅಪ್ಲಿಕೇಷನ್ ಹಾಕಿ ಅವರು ಕೇಳಿಕೊಂಡರೂ ಅದನ್ನು ಅವರಿಗೆ ಕೊಡದೆ ಆ ಜಮೀನಿಂದ ಅವರನ್ನು ತಕ್ಷಣ ಎವಿಕ್ಟ್ ಮಾಡಬೇಕೆಂದು ಕಲೆಕ್ಟರು ಆರ್ಡರ್ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀಮತಿ ಯಶೋಧರ ದಾಸಪ್ಪ.— ಅಂಥಾದ್ದು ಯಾವುದು ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಕೆ. ಲಕ್ಕಪ್ಪ.—ಈಗ ಎಷ್ಟೋ ಜಮೀನುಗಳನ್ನು ಹರಿಜನರಿಗೋಸ್ಕರ ಸರ್ಕಾರದವರು ಅಕ್ವೈರ್ ಮಾಡಿದ್ದಾರೆ. ಆ ಜಮೀನುಗಳನ್ನು ಇದುವರೆಗೂ ಅವರಿಗೆ ಕೊಟ್ಟಿಲ್ಲ. ಆ ರೀತಿ ಅಕ್ವೈರ್ ಆದ ಜಮೀನುಗಳ ಮೇಲೆ ಇಷ್ಟೇ ವರ್ಷಗಳಲ್ಲಿ ಮನೆಯನ್ನು ಕಟ್ಟಬೇಕೆಂದು ನಿಗದಿ ಮಾಡಿದ್ದೀರಾ?

ಶ್ರೀಮತಿ ಯಶೋಧರ ದಾಸಪ್ಪ.—ಅದಕ್ಕೆ ಯಾವ ಕಾಲವನ್ನು ನಿಗದಿ ಮಾಡಿಲ್ಲ.

ಶ್ರೀ ಕೆ. ಎಚ್. ರಂಗನಾಥ್.— ಹರಿಜನರಿಗೆ ಸಂಬಂಧಪಟ್ಟ 26 ಕೇಸುಗಳು ಇನ್ನೂ ಇತ್ಯರ್ಥವಾಗಿಲ್ಲ ಎಂದು ಹೇಳಿದ್ದೀರಿ. ಅದರಲ್ಲಿ ಯಾವ ಯಾವ ಕೇಸುಗಳು ಯಾವ ಯಾವ ಸ್ಟೇಜಿನಲ್ಲಿವೆ, ಪ್ರಿಲಿಮಿನರಿ ನೋಟಿಫಿಕೇಷ್ಟ ಇಷ್ಯೂ ಮಾಡಿರುವ ಕೇಸುಗಳೆಷ್ಟು? ಫೈನಲ್ ನೋಟಿಫಿಕೇಷನ್ ಇಷ್ಯೂ ಮಾಡಿರುವ ಕೇಸುಗಳೆಷ್ಟು, ಮತ್ತು ಅವಾರ್ಡ್ ಸ್ಟೇಜಸ್‌ನಲ್ಲಿರುವ ಕೇಸುಗಳೆಷ್ಟು?

ಶ್ರೀಮತಿ ಯಶೋಧರ ದಾಸಪ್ಪ.—ಪೆಂಡಿಂಗ್ ಯಾವ ಕೇಸುಗಳೂ ಇಲ್ಲ. 1961-62 ರ ಕೇಸುಗಳು ಅಕ್ವಿಜಿಷನ್ ಆಗುವುದರೊಳಗೆ ಇವೆ.

ಶ್ರೀ ವಿ. ಎಂ. ದೇವ್.— ಸರ್ಕಾರದವರು ಖಾಸಗಿಯವರಿಂದ ಜಮೀನನ್ನು ಅಕ್ವೈರ್ ಮಾಡಿಕೊಂಡು ಅವರಿಗೆ ದುಡ್ಡು ಕೊಡುತ್ತಾರೆ. ಆ ರೀತಿ ಅಕ್ವೈರ್ ಮಾಡಿಕೊಂಡ ಜಮೀನನ್ನು ಹರಿಜನರಿಗೆ ಫ್ರೀ ಆಗಿ ಕೊಡುತ್ತಾರೆ. ಸರ್ಕಾರದವರು ಖಾಸಗಿಯವರಿಂದ ಜಮೀನನ್ನು ಅಕ್ವೈರ್ ಮಾಡಿಕೊಳ್ಳುವಾಗ ಅವರು ಒಂದು ಎಕರೆ ಜಮೀನಿಗೆ 100 ರೂಪಾಯಿಗಳಿಂದ ಹಿಡಿದು ಎರಡು ಸಾವಿರ, ಮೂರು ಸಾವಿರ ರೂಪಾಯಿಗಳವರೆಗೆ ಯದ್ವಾ ತದ್ವಾ ಜಮೀನಿನ ಬೆಲೆಯನ್ನು ಏರಿಸುತ್ತಾರೆ. ಆದ್ದರಿಂದ ಸರ್ಕಾರದವರು ಖಾಸಗೀ ಅವರಿಂದ ಭೂಮಿಯನ್ನು ತೆಗೆದುಕೊಳ್ಳಬೇಕಾದರೆ ಅವರಿಗೆ ಕಂದಾಯದ ಇಷ್ಟು ಪಟ್ಟು ಕೊಡಬೇಕೆಂದು ನಿಗದಿ ಮಾಡಿದರೆ ಕೇಸುಗಳು ಬೇಗ ಬಗೆಹರಿಯುವುದಕ್ಕೆ ಅನುಕೂಲವಾಗುತ್ತದೆ.

ಶ್ರೀಮತಿ ಯಶೋಧರ ದಾಸಪ್ಪ.—ಅಲ್ಲಿಯ ಆಕ್ಕ ಪಕ್ಕದ ಜಮೀನಿನ ವ್ಯಾಲ್ಯೂಯೇಷನ್ ಪ್ರಕಾರ ಸರ್ಕಾರದವರು ತೀರ್ಮಾನ ಮಾಡಿ ಅದರಂತೆ ಪರಿಹಾರವನ್ನು ಕೊಡುತ್ತಾರೆ.

ಶ್ರೀ ವಿ. ಎಂ. ದೇವ್.— ಈಗ ಆಕ್ವೈರ್ ಮಾಡಿಕೊಳ್ಳತಕ್ಕ ಜಮೀನಿನ ಕಂದಾಯ ಒಂದು ಎಕರೆಗೆ 5 ರೂಪಾಯಿ ಇದ್ದರೆ ಅದರ 20 ಪಟ್ಟು ಕಾಂಪೆನ್ಸೇಷನ್ ಕೊಡಬೇಕೆಂದು ನಿಗದಿ ಮಾಡುತ್ತೀರಾ?

ಶ್ರೀಮತಿ ಯಶೋಧರ ದಾಸಪ್ಪ.— ಮಾರ್ಕೆಟ್ ವ್ಯಾಲ್ಯೂ ಏನಿದೆಯೋ ಅದರಂತೆ ನಿಗದಿ ಮಾಡಿಕೊಡುತ್ತೇವೆ.

Special Officer for Rehabilitation Work in Flood affeted areas of Dharwar District.

*Q.—684. Sri B.V. MAGAVI (Haveri). Will the Government be pleased to state :—

whether they are aware of the fact that the Special Officer for Rehabilitation work in flood affected areas of Dharwar District has not joined duty as yet though the appointment was made as early as May 1962?

A.—Sri M. V. KRISHNAPPA (Minister for Revenue).—

Yes. The post of Special Officer sanctioned in April 1962 has been discontinued with effect from 1st July 1962.

Sri B. V. MAGAVI.—If the Special Officer has not been appointed what other alternative arrangement has been made in this regard?

ಶ್ರೀ ಎಂ. ವಿ. ಕೃಷ್ಣಪ್ಪ.— ಮೊದಲು ಅಲ್ಲಿ ಒಬ್ಬ ಸ್ಪೆಷರ್ ಆಫೀಸರನ್ನು ನೇಮಕ ಮಾಡಿತ್ತು. ಕೆಲವು ದಿವಸಗಳಾದಮೇಲೆ ಅಲ್ಲಿರುವ ರೆಗ್ಯುಲರ್ ಸಬ್ ಡಿವಿಜನ್ ಆಫೀಸರೇ ಆ ಕೆಲಸವನ್ನು ಮಾಡುತ್ತಾರೆ ಎಂದು ಅರ್ಜಿಗಳು ಬಂದುವು. ಆದರಮೇಲೆ ಸ್ಪೆಷರ್ ಆಫೀಸರು ಅನಾವಶ್ಯಕ ಎಂದು ತೀರ್ಮಾನವಾಯಿತು. ಮತ್ತೆ ಈ ಬಗ್ಗೆ ಮುಖ್ಯಮಂತ್ರಿಗಳ ಆಫೀಸಿನಲ್ಲಿ ಒಂದು ಕಮಿಟಿ ಮೀಟಿಂಗ್‌ಮಾಡಿ ಆ ಪ್ರಶ್ನೆಗಳನ್ನು ಯಾವರೀತಿ ಇತ್ಯರ್ಥ ಮಾಡಬೇಕೆಂದು ತೀರ್ಮಾನಮಾಡಿ ಎಲ್ಲಾ ಕಾರ್ಯಕ್ರಮಗಳನ್ನು ಕೈಕೊಂಡಿದ್ದೇವೆ.

Sri B. V. MAGAVI.—If he is appointed, when he is likely to take charge?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ಆಫೀಸರನ್ನು ಇಷ್ಟರಲ್ಲೇ ರೀ ಅಪಾಯಿಂಟ್ ಮಾಡುತ್ತೇವೆ. ಅವರು ಇನ್ನು 2-ಆ ದಿವಸಗಳಲ್ಲೇ ಚಾರ್ಜ್ ತೆಗೆದುಕೊಂಡು ಇನ್ನು ಎರಡು ತಿಂಗಳೊಳಗಾಗಿ ಆ ಕೆಲಸವನ್ನು ಮುಗಿಸಬೇಕೆಂದು ತೀರ್ಮಾನವಾಗಿದೆ.